ಆದರ ಕೆಲಸವನ್ನು ತೆಗೆದುಕೊಂಡು ಮಾಡುತ್ತಾರೆ ಎಂದು ನಾನು ತಮ್ಮ ಮೂಲಕ ಸರ್ಕಾರದವರನ್ನು ಕೇಳುತ್ತಿದ್ದೇನೆ.

ಶ್ರೀ ಎ. ಕೆ. ಅಬ್ದುಲ್ ಸಮದ್.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನಾನು ಮತ್ತು ಶ್ರೀ ಕೆ. ಬಿ. ಶಿವಯ್ಯನವರು ಪ್ರಾತನಾಡಿದಂತಹ ಕಾಲದಲ್ಲಿ ಈ ಆಸ್ಪತ್ರೆ ಓಲ್ಡ್ ಬಿಲ್ಡಿಂಗ್ ಪಕ್ಕದಲ್ಲಿ ಬರಬಾರದು, ಹೊಸ ಜಾಗದಲ್ಲಿ ಬರಬೇಕು, ಹೊಸ ಜಾಗವನ್ನು ನಾವು ನೋಡಿದ್ದೇವೆ. ಎಂದು ಅವರು ಹೇಳಿದರು. ಅಲ್ಲದೆ ಈ ಬಗ್ಗೆ ರೆವೆನ್ಯೂ ಅಥಾರಿಟೀಸ್ ಆಗಲೀ ಅಥವಾ ಡೆಪ್ಯುಟಿ ಕಮೀಷನರ್ ಆಗಲೀ ಇಲ್ಲಿಯವರೆಗೆ ನಮಗೆ ಪೊಸೆಷನ್ ಪ್ರಪೋಸಲ್ಸ್ ಕಳಿಸಲಿಲ್ಲ ಅದು ನಮಗೆ ಬಂದ ತಕ್ಷಣ ನಾವು ಈ ಬಗ್ಗೆ ಪ್ಲಾನ್ ಅಂಡ್ ಎಸ್ಟಿಮೇಟ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇಲ್ಲಿ ಉತ್ತರದಲ್ಲಿ ನಾವು ೩೦ ಬೆಡ್ಡಿಡ್ ಹಾಸ್ಪಿಟಲ್ ಎಂದು ಹೇಳಿದ್ದೇವೆ. since it is a sub-division Headquarters at the time of the preparation of plans and estimates, we will make provision for 50 bedded hospital. ನಾವು ಅಲ್ಲಿ ೫೦ ಬೆಡ್‌ಗಳ ಒಂದು ಆಸ್ಪತ್ರೆಯನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಬಿ. ಶಿವಯ್ಯ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಂಜನಗೂಡು ಟೌನ್‌ನಲ್ಲಿ ಆಸ್ಪತ್ರೆಯನ್ನು ಕಟ್ಟುವುದಕ್ಕಾಗಿ ಜಿಲ್ಲಾಧಿಕಾರಿಯವರು ಒಂದು ಹೊಸ ಸೈಟನ್ನು ನೋಡಿ, ಸುಮಾರು ೩ ಎಕರೆ, ೧೮ ಗುಂಟೆಯಷ್ಟು ಸರ್ಕಾರಿ ಜಮೀನನ್ನು ಅದಕ್ಕೆ ಪಹಿಸಿಕೊಡುವ ಬಗ್ಗೆ ಒಂದು ವರದಿಯನ್ನು ಕಳಿಸಿ ಕೊಟ್ಟಿದ್ದಾರೆಂದು ನನಗೆ ತಿಳಿದುಬಂದಿದೆ. ಈಗ ಸರ್ಕಾರದ ವಶದಲ್ಲಿರತಕ್ಕಂಥ ಈ ೩ ಎಕರೆ, ೧೮ ಗುಂಟೆ ಜಮೀನಿನಲ್ಲಿ ಆಸ್ಪತ್ರೆಯನ್ನು ಕಟ್ಟಿಸಲು ಮತ್ತು ಒಂದು ಅಂದಾಜನ್ನು ತಯಾರು ಮಾಡಲು ಸರ್ಕಾರಕ್ಕೆ ಈಗ ಯಾವ ತೊಂದರೆಯೂ ಇಲ್ಲ. ಈ ವಿಚಾರದಲ್ಲಿ ಸರ್ಕಾರ ಇನ್ನು ಮುಂದೆ ಯಾವ ಕ್ರಮ ತೆಗೆದು ಕೊಳ್ಳುತ್ತಾರೆ ಎಂದು ನಾನು ತಮ್ಮ ಮೂಲಕ ಹೇಳುತ್ತೇನೆ.

SRI A. K. ABDUL SAMAD.—Sir, We have not yet received the report from the Deputy Commissioner. As soon as I get the report, I will expedite.

Filling up of Members of the Karnataka Public Service Commission.

1157 SRI M. GANGANNA (Kustagi). - Will the Chief Minister be pleased to state

(a) the number of members idcl ding the Chairman at the Karnataka Public Service Commission Out of them the numbers of non oifficial members

(b) the date from which the posts of non-official members are fallen vacant

(c) whether it has come to the notice of Government that there are no members in the present Commission representing from North Karnataka area, if so, the measures proposed to be taken by the Government to remove this anomaly ?

SRI R. GUNDU RAO (Chief Minister).—

(a) At present the number of members are five. Out of them, the number of non official members are two.

(b) Two posts are fallen vacant from the dates noted hereunder 11-8-1981 and 22-1-1982

(c) Appointment of Members cannot be made on regional basis

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಉತ್ತರದಲ್ಲಿ 'ಸದಸ್ಯರ ನೇಮಕಾತಿಯನ್ನು ಪ್ರಾದೇಶಿಕ ಆಧಾರದಮೇಲೆ ಮಾಡಲಾಗುವುದಿಲ್ಲ' ಎಂದು ಹೇಳಿದ್ದಾರೆ. ಈ ಲೋಕಸೇವಾಯೋಗದಲ್ಲಿ ಕಳೆದ ಒಂದೂವರೆ ವರ್ಷಗಳಿಂದ ಈ ಸದಸ್ಯರುಗಳು ಇಲ್ಲದೇ ಇರುವುದರಿಂದ ಉತ್ತರಕರ್ನಾಟಕದ ಅನೇಕ ಅರ್ಹಾರಾದ ಆಭ್ಯರ್ಥಿಗಳಿಗೆ ಉದ್ಯೋಗಾವಕಾಶದಲ್ಲಿ ಅನ್ಯಾಯವಾಗಿದೆ ಎನ್ನತಕ್ಕಂಥ ದೂರು ಕೇಳಿಬರುತ್ತಿದೆ. ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಸದಸ್ಯರ ನೇಮಕಾತಿಯನ್ನು ಅರ್ಹತೆಯ ಆಧಾರದಮೇಲೆ ಮಾಡುತ್ತೇವೆಯೇ ವಿನಹ ಪ್ರಾದೇಶಿಕ ಆಧಾರದ ಮೇಲೆ ನಾವು ಮಾಡುವುದಿಲ್ಲ. ಇದನ್ನು ಈಗಾಗಲೇ ನಾನು ಉತ್ತರದಲ್ಲಿ ಹೇಳಿದ್ದೇನೆ. ಆದರೆ ಸದಸ್ಯರನ್ನು ನೇಮಕ ಮಾಡಬೇಕಾದರೆ ಹಲವಾರು ವಿಷಯಗಳು ಇರುತ್ತವೆ. ಅದನ್ನು ನಾವು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ. ಇದರಲ್ಲಿ ಉತ್ತರಕರ್ನಾಟಕದವರಿಗೆ ಸಾಕಷ್ಟು ಪ್ರಾತಿನಿಧ್ಯತೆ ಇಲ್ಲ ಎಂದು ಹೇಳತಕ್ಕಂಥಾದ್ದು ಸರಿ. ಆದರೆ ಈಗ ಅಲ್ಲಿ ಯಾರು ಚೇರ್ಮನ್ನರು ಇದ್ದಾರೆ ಅವರು ಗುಲ್ಬರ್ಗ ಜಿಲ್ಲೆಯವರು.

ಶ್ರೀ ಎಂ. ಗಂಗಣ್ಣ.—ಸ್ವಾಮಿ, ಇಲ್ಲಿ ಕೊಟ್ಟಿರತಕ್ಕಂಥ ಉತ್ತರದ ಪ್ರಕಾರ ಲೋಕಸೇವಾ ಆಯೋಗದಲ್ಲಿ ೨ ಹುದ್ದೆಗಳು ಸುಮಾರು ೧ವರ್ಷ, ೬ ತಿಂಗಳಿನಿಂದ ಖಾಲಿ ಇದೆ. ಈ ಹುದ್ದೆಗಳಿಗೆ ಭರ್ತಿ ಮಾಡತಕ್ಕಂಥ ಕಾರ್ಯದಲ್ಲಿ ಇಷ್ಟೊಂದು ವಿಳಂಬವಾಗುವುದಕ್ಕೆ ಕಾರಣವೇನು ? ಇದನ್ನು ಯಾವಾಗ ಭರ್ತಿ ಮಾಡುತ್ತಾರೆ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಆದಷ್ಟುಬೇಗ ನಾವು ಆ ಹುದ್ದೆಗಳಿಗೆ ಭರ್ತಿ ಮಾಡುತ್ತೇವೆ. ಆ ಸದಸ್ಯರಲ್ಲಿ ಒಬ್ಬರು ತೀರಿಹೋದರು, ಒಬ್ಬರು ಚೇರ್ಮನ್ ಆದರು, ಖಾಲಿ ಬಿದ್ದಂತಹ ಆ ಹುದ್ದೆಗಳಿಗೆ ಅರ್ಹರಾದವರನ್ನೇ ನಾವು ಆದಷ್ಟು ಬೇಗನೆ ಭರ್ತಿ ಮಾಡುತ್ತೇವೆ.

ಶ್ರೀ ಎಂ. ಗಂಗಣ್ಣ.—ಸ್ವಾಮಿ, ಲೋಕಸೇವಾಯೋಗದಲ್ಲಿ ಈ ಪರಿಶಿಷ್ಟ ಜಾತಿ ಮತ್ತು ಪಂಗಡಗಳವರಿಗೆ ಇದರಲ್ಲಿ ಪ್ರಾತಿನಿಧ್ಯತೆ ಸಿಕ್ಕಬೇಕು ಎಂದು ನಾನು ಹೇಳುತ್ತೇನೆ. ಆ ಪರಿಶಿಷ್ಟ ಜಾತಿ ಮತ್ತು ಪಂಗಡಗಳವರಿಗೆ ಇದರಲ್ಲಿ ಪ್ರಾತಿನಿಧ್ಯತೆ ಇಲ್ಲದೇ ಇರುವುದರಿಂದ ಆ ಜನಾಂಗದ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳು ದಕ್ಕುತ್ತಾ ಇಲ್ಲ ಎನ್ನತಕ್ಕಂಥ ದೂರು ಇದೆ. ಅಂತಹ ದೂರನ್ನು ಆಲಿಸಿ ಹಾಕಲಂ. ಇನ್ನು ಎಷ್ಟು ದಿನಗಳಲ್ಲಿ ಆ ಜನಾಂಗದ ಅರ್ಹರಾದ ವ್ಯಕ್ತಿಗಳನ್ನು ಆ ಎರಡು ಸ್ಥಾನಗಳಿಗೆ ತುಂಬಲು ಸರ್ಕಾರದವರು ಕ್ರಮ ಕೈಕೊಳ್ಳುತ್ತಾರೆ ಎಂದ ಕೇಳಬಯಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಆದಷ್ಟು ಬೇಗ ಎಂದು ನಾನು ಈಗಾಗಲೇ ತಿಳಿಸಿದ್ದೇನೆ, ಆದಷ್ಟು ಬೇಗನೆ ಆ ಹುದ್ದೆಗಳಿಗೆ ಭರ್ತಿ ಮಾಡುತ್ತೇವೆ.

Starting of First Grade Colleges during academic years

1256 SRI S.M. SHEERANALY CHANDRASHEKHAR (Hosanagar).—Will the Minister for Education be pleased to state;

(a) the policy of Government in starting First Grade Colleges in Karnataka

(b) the number of First Grade Colleges to be started during the ensuing academic year

(c) whether the Government is aware that there is great need in Hosanagar to start a First Grade College